IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ದೃಶ್ಯಕಾವ್ಯಕ್ಕೆ ನಾಟ್ಯಶಾಸ್ತ್ರದ ಕೊಡುಗೆ

**ಡಾ. ಡಿ ಸಿ ಶಿವಕುಮಾರ**

ಕನ್ನಡ ಸಹಾಯಕ ಪ್ರಾಧ್ಯಪಕರು
ಜೈನ್ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ
ಜೆ.ಸಿ. ರಸ್ತೆ, ಬೆಂಗಳೂರು, ಕರ್ನಾಟಕ, ಭಾರತ

ಭರತಮುನಿಯೆಂಬ ವಿದ್ವಾಂಸನು ನಾಟ್ಯ ಪ್ರಧಾನವಾಗಿ ರಚಿಸಿದ ನಾಟ್ಯಶಾಸ್ತ್ರ ಕೃತಿಯು, ರಂಗಭೂಮಿ ಕ್ಷೇತ್ರಕ್ಕೂ ಪ್ರಭಾವವನ್ನು ಬೀರಿತು. ನಾಟ್ಯಶಾಸ್ತ್ರ ಕೃತಿಯ ಮೂಲಕ ಉತ್ಸವ ಮೂರ್ತಿ ಪ್ರೇಕ್ಷಕನಿಗೆ ವಿವಿಧ ರೀತಿಯ ರಸಗಳನ್ನು ಉಣಬಡಿಸುವ ಮೂಲಕ ಇಂದಿಗೂ ಕೂಡ ತನ್ನದೇ ಆದ ವಿಶಿಷ್ಟ ಛಾಪು ಬೀರಿದ ವಿದ್ವಾಂಸನಾಗಿದ್ದಾನೆ. ಆ ಕಾರಣಕ್ಕಾಗಿಯೇ ಈತನನ್ನು "ಭಾರತದ ರಂಗಭೂಮಿಯ ಪಿತಾಮಹ" ಎಂದು ಕರೆಯಲಾಗುತ್ತದೆ. ಇವನ ನಾಟ್ಯಶಾಸ್ತ್ರ ಕೃತಿ ದೇಶಿಯ ರಂಗಕಲೆಗೆಯಷ್ಟೇ ಸೀಮಿತವಾಗಿರದೇ ವಿಶ್ವದ ಬಹುಪಾಲು ರಾಷ್ಟ್ರಗಳ ರಂಗಭೂಮಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕೊಡುಗೆಯನ್ನು ಭರತ ನೀಡಿದ್ದಾನೆಂದರೆ ಅತಿಶಯೋಕ್ತಿಯಾಗಲಾರದು. ಪ್ರೇಕ್ಷನಿಗೆ ನಟನ ಅಭಿನಯವು ಪ್ರಭಾವ ಬೀರಬೇಕೆಂದರೆ ಅದು ಹೇಗೆ? ಯಾವ ರೀತಿ? ಅಭಿನಯದ ಮೂಲಕ ಪ್ರಭಾವ ಬೀರುತ್ತಾನೆಂಬುದು ಪ್ರಮುಖವಾಗಿರುತ್ತದೆ. ಭರತನೆಂಬ ವಿದ್ವಾಂಸ ತನ್ನ ಕೃತಿಯನ್ನು ನಾಟ್ಯ ಮತ್ತು ಕಾವ್ಯವನ್ನು ಗಮನದಲ್ಲಿಟ್ಟುಕೊಂಡು ರಚನೆ ಮಾಡಿದರೂ ಕೂಡ ಅದು ನಾಟಕದ ಪ್ರಭಾವ ಮತ್ತು ಜೀವಂತಿಕೆಗೆ ಸಾಕ್ಷಿಯಾಯಿತು.

ಭರತಮುನಿಯೆಂಬ ವಿದ್ವಾಂಸನು ನಾಟ್ಯ ಪ್ರಧಾನವಾಗಿ ರಚಿಸಿದ ನಾಟ್ಯಶಾಸ್ತ್ರ ಕೃತಿಯು, ರಂಗಭೂಮಿ ಕ್ಷೇತ್ರಕ್ಕೂ ಪ್ರಭಾವವನ್ನು ಬೀರಿತು. ನಾಟ್ಯಶಾಸ್ತ್ರ ಕೃತಿಯ ಮೂಲಕ ಉತ್ಸವ ಮೂರ್ತಿ ಪ್ರೇಕ್ಷಕನಿಗೆ ವಿವಿಧ ರೀತಿಯ ರಸಗಳನ್ನು ಉಣಬಡಿಸುವ ಮೂಲಕ ಇಂದಿಗೂ ಕೂಡ ತನ್ನದೇ ಆದ ವಿಶಿಷ್ಟ ಛಾಪು ಬೀರಿದ ವಿದ್ವಾಂಸನಾಗಿದ್ದಾನೆ. ಆ ಕಾರಣಕ್ಕಾಗಿಯೇ ಈತನನ್ನು "ಭಾರತದ ರಂಗಭೂಮಿಯ ಪಿತಾಮಹ" ಎಂದು ಕರೆಯಲಾಗುತ್ತದೆ. ಇವನ ನಾಟ್ಯಶಾಸ್ತ್ರ ಕೃತಿ ದೇಶಿಯ ರಂಗಕಲೆಗೆಯಷ್ಟೇ ಸೀಮಿತವಾಗಿರದೇ ವಿಶ್ವದ ಬಹುಪಾಲು ರಾಷ್ಟ್ರಗಳ ರಂಗಭೂಮಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕೊಡುಗೆಯನ್ನು ಭರತ ನೀಡಿದ್ದಾನೆಂದರೆ ಅತಿಶಯೋಕ್ತಿಯಾಗಲಾರದು. ಪ್ರೇಕ್ಷನಿಗೆ ನಟನ ಅಭಿನಯವು ಪ್ರಭಾವ ಬೀರಬೇಕೆಂದರೆ ಅದು ಹೇಗೆ? ಯಾವ ರೀತಿ? ಅಭಿನಯದ ಮೂಲಕ ಪ್ರಭಾವ ಬೀರುತ್ತಾನೆಂಬುದು ಪ್ರಮುಖವಾಗಿರುತ್ತದೆ. ಭರತನೆಂಬ ವಿದ್ವಾಂಸ ತನ್ನ ಕೃತಿಯನ್ನು ನಾಟ್ಯ ಮತ್ತು ಕಾವ್ಯವನ್ನು ಗಮನದಲ್ಲಿಟ್ಟುಕೊಂಡು ರಚನೆ ಮಾಡಿದರೂ ಕೂಡ ಅದು ನಾಟಕದ ಪ್ರಭಾವ ಮತ್ತು ಜೀವಂತಿಕೆಗೆ ಸಾಕ್ಷಿಯಾಯಿತು.

**ಭರತನ ನಾಟ್ಯಶಾಸ್ತ್ರ ಕೃತಿಯ ವಿಶೇಷತೆ ಮತ್ತು ಮಹತ್ವ**

ರಾಮಾಯಣ ಮತ್ತು ಮಹಾಭಾರತ ಪುರಾಣವನ್ನು ಕಾವ್ಯದ, ನಾಟಕದ ವಸ್ತುವನ್ನಾಗಿ ತೆಗೆದುಕೊಂಡು ಕಾವ್ಯ ಕೃತಿಗಳನ್ನು ನಾಟಕಗಳನ್ನು ಭಾರತೀಯರ ಮಟ್ಟಿಗೆ ರಚಿಸಲಾಯಿತು. ಇಂತಹ ಕೃತಿಗಳು ರಸಾನುಭವವನ್ನು ಉಂಟುಮಾಡುತ್ತಾ, ಪ್ರೇಕ್ಷಕನಿಗೆ ಕೃತಿಯ ಉದ್ದೇಶವನ್ನು ತಿಳಿಸುತ್ತಿದ್ದವು. ಇದೇ ವೇಳೆಗೆ ಗ್ರೀಕ್ ಪುರಾಣದ ಇನಿಯಡ್ ಮತ್ತು ಒಡಿಸ್ಸಿಯಲ್ಲಿ ಬರುವ ಪಾತ್ರಗಳು, ಸನ್ನಿವೇಶಗಳು ಕಾವ್ಯಕೃತಿಗಳು ಮತ್ತು ನಾಟಕ ಕೃತಿಯ ವಸ್ತುಗಳನ್ನಾಗಿ ಮಾಡಿಕೊಳ್ಳುತ್ತಿದ್ದರು. ಇಂತಹ ಕೃತಿಗಳು ಪ್ರೇಕ್ಷಕನಿಗೆ/ಓದುಗನಿಗೆ ತಲುಪಬೇಕಾದರೆ ಅದು ರಸಾನುಭವವನ್ನು ಉಂಟುಮಾಡುವ ಅವಶ್ಯಕತೆ ಇತ್ತು. ಜೊತೆಗೆ ಸಿದ್ಧಾಂತದ ಅವಶ್ಯಕತೆ ಇತ್ತು. ಇಂಥ ಕೆಲಸವನ್ನು ಅನಾದಿ ಕಾಲದಿಂದಲೂ ಅನೇಕ ವಿದ್ವಾಂಸರು ತಮ್ಮ ಕೃತಿಗಳಲ್ಲಿ ಬಳಸುತ್ತಾ ಬಂದರು. ಅವರಲ್ಲಿ ಭಾರತದ ಮಟ್ಟಿಗೆ ಭರತ ಮುನಿಯು ಪ್ರಮುಖನು. ಈತನು ಕ್ರಿ.ಶ.ಸುಮಾರು ೨ನೇ ಶತಮಾನದಿಂದ ೬ನೇ ಶತಮಾನದವರಿಗೆ ಇದ್ದನೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಭರತನು ತನ್ನ ನಾಟ್ಯಶಾಸ್ತ್ರ ಕೃತಿಯಲ್ಲಿ ೩೬ ಅಧ್ಯಾಯಗಳನ್ನು ರಚಿಸಿದ್ದು ಬಹುಪಾಲು ನಾಟ್ಯಕ್ಕೆ ಸಂಬಂಧಿಸಿದಂತೆ ರಸ ಸಿದ್ಧಾಂತಗಳು ಸೀಮತವಾದರೂ, ಅದರಲ್ಲಿ ಪ್ರೇಕ್ಷಕನಿಗೆ ಹತ್ತಿರವಾಗುವ ಅಭಿನಯ ಕಲೆಗೆ ಅವು ಅವಶ್ಯಕವಾಗಿ ಕಂಡುಬರುತ್ತವೆ. "ವಿಭಾನುಭಾವ ವ್ಯಭಿಚಾರಿ ಸಂಯೋಗಾದ್ರಸ ನಿಷ್ಪತ್ತಿಃ" ಎಂಬ ರಸ ಸೂತ್ರವನ್ನು ಉಲ್ಲೇಖಿಸುವ ಮೂಲಕ ಎಂಟು ಪ್ರಮುಖ ರಸಭಾವಗಳನ್ನು ಉಲ್ಲೇಖಿಸುತ್ತಾನೆ. ಅದರ ಪ್ರಭಾವದಿಂದ ಮುಂದೆ ಬಂದಂತಹ ಕಾವ್ಯ ಕರ್ತೃಗಳು, ವಿದ್ವಾಂಸರು ತಮ್ಮದೇ ಆದ ವ್ಯಾಖ್ಯಾನಗಳನ್ನು ನೀಡಿ ಕಾವ್ಯ ಕೃತಿಗಳ ಬೆಳವಣಿಗೆಗೆ ಕಾರಣರಾದರು. ಭರತನ ಮೇಲಿನ ರಸ ಸೂತ್ರವನ್ನು ವಿಂಗಡಿಸಿದಾಗ "ವಿಭಾವ – ಕಾರಣ ರೂಪ, ಅನುಭಾವ – ಕಾರ್ಯರೂಪ, ಸಂಚಾರಿಭಾವ – (ವ್ಯಭಿಚಾರಿ/ಸಹಕಾರಿ) – ಈ ಮೂರು ಅಂಶಗಳಿಂದ ಉಂಟಾಗುದುದೇ ರಸಾನುಭವ ಎಂದು ಹೇಳಲಾಗುತ್ತದೆ.

ಕಾವ್ಯದ ಉದ್ದೇಶ ಓದುಗನಿಗೆ ತಲುಪಬೇಕಾದರೆ, ನಾಟ್ಯದ ಅಭಿನಯ ಸವಿ ನೋಡುಗನು ಆಶ್ವಾದಿಸಬೇಕಾದರೆ, ನಾಟಕದ ಅಭಿನಯ ದೃಶ್ಯ ಮತ್ತು ಶ್ರವ್ಯದ ಮೂಲಕ ಪ್ರೇಕ್ಷಕನಿಗೆ ಪರಿಣಾಮಕಾರಿಯಾಗಿ ತಲುಪಬೇಕಾದರೆ ರಸಾನುಭವ ಆಗಲೇ ಬೇಕು. ಆಗ ಮಾತ್ರ ಅವುಗಳ ಸಾರ್ಥಕತೆ ಉಂಟಾಗುತ್ತದೆ. ಆ ನಿಟ್ಟಿನಲ್ಲಿ ಭರತನು ತನ್ನ  ನಾಟ್ಯಶಾಸ್ತ್ರ ಕೃತಿಯ ಆರನೇ ಅಧ್ಯಾಯದಲ್ಲಿ ರಸಸೂತ್ರವನ್ನು ಮತ್ತು ಪ್ರಮುಖವಾಗಿ ಎಂಟು ರಸ ಭಾವಗಳನ್ನು ಉಲ್ಲೇಖಿಸುತ್ತಾನೆ. ಅವುಗಳು ಕಾಲನಂತರದಲ್ಲಿ ಮುಂದಿನ ಕೃತಿಗಾರರಿಗೆ ಮಾರ್ಗದರ್ಶಕವಾಗಿ ಮುಂದುವರೆಯುತ್ತವೆ. ಅವುಗಳು ಯಾವುವು ಅವುಗಳ ಸ್ಥಾಯಿ ಭಾವ ಯಾವುವು? ಅವುಗಳು ಕಾವ್ಯದಲ್ಲಿ, ನಾಟಕದಲ್ಲಿ ಹೇಗೆ ಪ್ರಭಾವವನ್ನು ಬೀರಿವೆ? ಎಂಬುದನ್ನು ಕವಿ ಕಾವ್ಯಗಳ ಉದಾಹರಣೆಗಳ ಸಹಿತ ಪ್ರಸ್ತುತ ಪತ್ರಿಕೆಯಲ್ಲಿ ಪ್ರಾಸಂಗೀಕವಾಗಿ ಕೆಲವೊಂದು ಉದಾಹರಣೆಗಳ ಮೂಲಕ ವಿಶ್ಲೇಷಣೆ ಮಾಡಲಾಗಿದೆ.

ದೃಶ್ಯಕಾವ್ಯದ ಉತ್ಕಟತೆಯನ್ನು ತೋರಿಸುವುದೇ ಶೃಂಗಾರ ರಸ ಇದರ ಸ್ಥಾಯಿ ಭಾವವೇ ರತಿ. ರತಿ ಎಂಬುದು ಸೌಂದರ್ಯದ ಸಂಕೇತ. ಪುರಾಣದಲ್ಲಿ ಅದರ ನಾಮಂಕಿತ ಮನ್ಮಥನ ಹೆಂಡತಿಯಾಗಿದ್ದಾಳೆ. ವ್ಯಕ್ತಿಯಲ್ಲಿರುವ ಕಾಮವನ್ನು ಉದ್ದೀಪನ ಗೊಳಿಸುವುದೇ ರತಿಭಾವ ಅತಿಮುಖ್ಯ ಕರ್ತವ್ಯವಾಗಿರುತ್ತದೆ. ರತಿಯಿಂದ ಉಂಟಾಗುವದೇ ಸಂಭೋಗ ಅದು ಮನುಷ್ಯನ ನಾಚಿಕೆಯ ಸ್ವಭಾವವನ್ನು ತೋರಿದರೂ ಪ್ರಕೃತಿಯ ಜೀವಾಂಕುರಕ್ಕೆ ಸಹಜವಾದ ಕಾಣಿಕೆಯಾಗಿದೆ. ಶೃಂಗಾರವಿಲ್ಲದ ಕಾವ್ಯವೂ ಪರಿಪೂರ್ಣವಾಗುವುದಿಲ್ಲ. ಕನ್ನಡದ ಮಟ್ಟಿಗೆ ಹೇಳುವುದಾದರೆ ಪಂಪನ ಆದಿಪುರಾಣದ ನೀಲಾಂಜನೆ, ವಿಕ್ರಮಾರ್ಜುನ ವಿಜಯದಲ್ಲಿ ಅರ್ಜುನನ್ನು ನೋಡಿ ಮನಸೋತ ಸುಭದ್ರೆಯ ಮನಸ್ಥಿತಿ ರತಿಭಾವವನ್ನು ಉಂಟುಮಾಡುವುದೇ ಆಗಿದೆ. ಮುಂದುವರೆದಂತೆ ಜನ್ನನ ಯಶೋಧರ ಚರಿತೆಯ ಅಮೃತಮತಿಯೂ ಕೂಡ ಹೊರತಾಗಿಲ್ಲ. ಕುಮಾರವ್ಯಾಸಭಾರತದಲ್ಲಿ ಅರ್ಜುನನ್ನು ಕಂಡ ಊರ್ವಶಿ ಮೋಹಿತವಾಗುವ ಸನ್ನಿವೇಶ ಹೆಣ್ಣಿನ ಮನಸ್ಥಿತಿಯನ್ನು ತೋರಿಸುತ್ತದೆ.  ಹಾಗೆಯೇ ರತ್ನಾಕರವರ್ಣಿಯ ಭರತೇಶ ವೈಭವ ಕೃತಿಯು ಇದರಿಂದ ಬಹುಪಾಲು ಭಾಗ ಆವರಿಸಿಕೊಂಡಿದೆ. ಅದರಲ್ಲಿ ಶೃಂಗಾರವು ಅಲಂಕಾರ, ಸೌಂದರ್ಯ, ನೋಟ, ಸ್ಪರ್ಶದಿಂದ ಉದ್ದೀಪನಗೊಳ್ಳುತ್ತದೆ. ಗಂಡುವಿನ ಬುದ್ಧಿವಂತಿಕೆ ಹೆಣ್ಣಿನ ಸೌಂದರ್ಯದಲ್ಲಿ ಬಂಧಿಯಾಗುವ ಸನ್ನಿವೇಶಗಳಿಗೆ ಕೊನೆಯೇ ಇಲ್ಲ. ಬ್ರಹ್ಮ ಸನ್ಯಾಸಿ ವಿಶ್ವಮಿತ್ರನು ಮೇನಕೆಗೆ ಮನಸೋತ ಸನ್ನಿವೇಶವನ್ನು ಪುರಾಣದಲ್ಲಿ ಕಂಡುಬರುತ್ತದೆ.

ಕನ್ನಡದ ಕವಿ ಪಂಪನ ಆದಿಪುರಾಣ ಕೃತಿಯಲ್ಲಿ ವೃಷಭದೇವನು ರಾಜಪದವಿಯಿಂದ ವಿಮುಖಗೊಂಡು, ಆದಿನಾಥನಾಗುವ  ಸನ್ನಿವೇಶದಲ್ಲಿ ಇಂದ್ರನು ಪುರದೇವನಿಗೋಸ್ಕರ ಸಂತೋಷ ಕೂಟವನ್ನು ಏರ್ಪಡಿಸುತ್ತಾನೆ. ಇಂದ್ರನು ಅಲ್ಲಿ ನೀಲಾಂಜನೆಯೆಂಬ ಹೆಣ್ಣಿನ ನೃತ್ಯವನ್ನು ಏರ್ಪಡಿಸಿರುತ್ತಾನೆ. ಭೋಗದಿಂದ ಜಿಗುಪ್ಸೆಗೊಳ್ಳುವ ಸನ್ನಿವೇಶವನ್ನು ನೀಲಾಂಜನೆಯ ಸಾವಿನ ಮೂಲಕ ಹೇಳುವುದನ್ನು ಕಾಣುತ್ತೇವೆ.

....ಎನಿಸಿದ ನೀಳಾಂಜನೆ ಕ
ರ್ಬಿನ ಬಿಲ್ಲಿಂ ಮಸೆದ ಮದನನಲರ್ಗಣೆ ಬರ್ದುಕಿ
ತ್ತೆನಿಸುತ್ತೊಳಪೊಕ್ಕಳ್ ಭೋಂ
ಕೆನೆ ನಿಖಿಳ ಜನಾಂತರಂಗಮಂ ರಂಗಮುಮಂ  ಎನ್ನುವ ಸನ್ನಿವೇಶದಲ್ಲಿ ನೀಳಾಂಜನೆಯ ನೃತ್ಯ ಅದನ್ನು ಕವಿ ಕಾಮನ ಬಿಲ್ಲಿಗಿಂತ ಹರಿತವಾದ ಮನ್ಮಥನ ಹೂವಿನ ಬಾಣದ ಮೂಲಕ ಬಂದು ಅಲ್ಲಿ ಸೇರಿದ ಸಕಲಜನಗಳ ಅಂತರಂಗವನ್ನು ತಕ್ಷಣ ಹೊಕ್ಕಿದಳು ಎಂದು  ಹೇಳುವಾಗ ಭರತನ ನಾಟ್ಯಶಾಸ್ತ್ರದ ಶೃಂಗಾರ ರಸ ಸಿದ್ಧಾಂತವು ಕವಿಯ ಕಾವ್ಯದ ಬರವಣಿಗೆಗೆ ಪ್ರೇರಣೆಯಾಗಿರುವು ಕಂಡುಬರುತ್ತದೆ. ಅಂದಿನ  ಹಳಗನ್ನಡದ ಕಾವ್ಯಗಳು ಅಲಂಕಾರಿಕ ಪ್ರಕಾರಗಳನ್ನು ಹೊಂದಿದ್ದವು. ಅವುಗಳನ್ನು ಕವಿಗಳು ಕಾಲಕಾಲಕ್ಕೆ ತಮ್ಮ ಕೃತಿಗಳಲ್ಲಿ ಬಳಸಿಕೊಳ್ಳುತ್ತಿದ್ದರು ಎಂಬುದು ಕಂಡುಬರುತ್ತದೆ.

ಕಾಳಿದಾಸನ ಅಭಿಜ್ಞಾನ ಶಾಕುಂತಲ ನಾಟಕ ಕೃತಿಯಲ್ಲೂ ಕಂಡುಬರುತ್ತದೆ. ದುಶ್ಯಂತ ಮತ್ತು ಶಾಕುಂತಲೆಯ ನಡುವಿನ ಪ್ರೇಮ-ಕಾಮವನ್ನು ಶೃಂಗಾರ ರಸಭಾವದಲ್ಲಿ ಕಾಳಿದಾಸ ವರ್ಣಿಸುತ್ತಾನೆ. ಇಲ್ಲಿ ಭರತನ ನಾಟ್ಯಶಾಸ್ತ್ರದ ಪ್ರಭಾವವಿದೆಯೆಂದು ಹೇಳುವುದಾದರೂ ಕೂಡ ಕಾಳಿದಾಸ ಅವನ ಕಾಲದ ಹಿಂದಿನವನು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ ಕಾಲಘಟ್ಟದಲ್ಲಿ ವ್ಯಕ್ತಿಗಳ ಪರಿಚಯಕ್ಕಿಂತ ಶೃಂಗಾರ ರಸ ಭಾವದ ಪ್ರಭಾವವನ್ನು ಮಾತ್ರ ನೋಡಬೇಕಾಗುತ್ತದೆ.

ಶೃಂಗಾರ ರಸಭಾವದಷ್ಟೆ ಪ್ರಭಾವವಿರುವುದು ಹಾಸ್ಯರಸ. ಇದು ಹಾಸ ಭಾವದಿಂದ ಉದ್ದಿಪನಗೊಳ್ಳುತ್ತದೆ. ಭರತನು ವಿಭಿನ್ನವಾದ ನಡವಳಿಕೆ, ವಸ್ತ್ರವೈಭವ, ಆಂಗೀಕಭಾವ, ಮಾತುಗಳಿಂದ ರೂಪಿತವಾಗುತ್ತದೆಂದು ಎಂದು ಹೇಳುತ್ತಾನೆ. ಹದಿನೈದನೇ ಶತಮಾನದಲ್ಲಿದ್ದ ಕುಮಾರವ್ಯಾಸನು ಭಾರತದಲ್ಲಿ ಉತ್ತರಕುಮಾರನ ಪ್ರಸಂಗದಲ್ಲಿ ತರುತ್ತಾನೆ.

ಎಂದಡುಬರಿಸಿದನು ತಾ ಕಲಿ
ಯೆಂದು ಬಗೆದನು ಮೀಸೆಯನು ಬೆರ
ಳಿಂದ ತಿರುಹುತ ಮುಗುಳು ನಗೆ ಹರುಷದಲಿ ಮೈಮರೆದ
ಸಂದಣಿಸಿ ರೋಮಾಂಚ ಕೆಲ ಬಲ
ದಿಂದುಮುಖಿಯರ ನೋಡಿದನು ನಲ
ವಿಂದ ನುಡಿದನು ತನ್ನ ಪೌರುಷತನದ ಪರಿಣತಿಯ

ತನ್ನ ಅಂತಪುರದಲ್ಲಿದ್ದ ಹೆಂಗಳೆಯರ ಹೊಗಳಿಕೆಯಿಂದುಬ್ಬಿ ಉತ್ತರನು ತಾನು ವೀರನೆಂದೇ ಭಾವಿಸಿಕೊಂಡನು, ಬೆರಳಿಂದ ಮೀಸೆಯನ್ನು ತಿರುವಿ, ಹರ್ಷದಿಂದುಬ್ಬಿ ರೋಮಾಂಚನಗೊಂಡು, ತರುಣಿಯರನ್ನು ನೋಡುತ್ತಾ ತನ್ನ ಪೌರುಷವನ್ನು, ಯುದ್ಧದ ಕುಶಲತೆಯನ್ನು ಹೇಳಿಕೊಳ್ಳುವ ಹಾಸ್ಯ ಪ್ರಸಂಗವನ್ನು ಕುಮಾರವ್ಯಾಸನು ತರುತ್ತಾನೆ. ಅಂದಿನ ಭರತನ ರಸಸೂತ್ರದ ಹಾಸ್ಯ ಭಾವವನ್ನು ಕವಿ ತನ್ನ ಕಾವ್ಯದಲ್ಲಿ ತಂದಿರುವುದನ್ನು ನೋಡಬಹುದಾಗಿದೆ.

ಹಾಸ್ಯ ಪ್ರಸಂಗದ ನಾಟಕಗಳು ಹಳಗನ್ನಡದಲ್ಲಿ ಹೆಚ್ಚಾಗಿ ಕಂಡುಬರುತ್ತದ್ದರೂ ಪಾಶ್ಚಿಮಾತ್ಯ ನಾಟಕಗಳ ಪ್ರಭಾವದಿಂದ ಹೊಸತನ ಪಡೆದ ನಾಟಕಗಳು ರಚನೆಯಾಗತೊಡಗುತ್ತಾವೆ. ಬೀಚಿಯವರ ಬಹುಪಾಲು ನಾಟಕಗಳು ಹಾಸ್ಯಮಯದಿಂದ ಕೂಡಿದ್ದರೂ ಅವರ ಮೇಲೂ ಕೂಡ ಪರೋಕ್ಷವಾಗಿ ಈ ಹಾಸ್ಯಭಾವಗಳು ಪ್ರಭಾವವನ್ನು ಬೀರಿರುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಬ್ರಿಟಿಷರ ಇಂಗ್ಲಿಷ್ ಸಾಹಿತ್ಯ ಪ್ರಭಾವ ಬರುವ ಮುಂಚಿನ ಕನ್ನಡದ ಎಲ್ಲಾ ಸಾಹಿತ್ಯದ ಪ್ರಕಾರಗಳು ಕೂಡ ಪುರಾಣವನ್ನು ಕಥಾವಸ್ತುವನ್ನಾಗಿ ಇಟ್ಟುಕೊಂಡು ರಚನೆಯಾಗಿರುವುದನ್ನು ಕಾಣುತ್ತೇವೆ. ಆ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ಗಮನಿಸಿದಾಗ ಸಂಸ್ಕೃತದ ಪ್ರಭಾವ ಒಂದೊಂದು ಕೃತಿಯಲ್ಲೂ ಕಂಡುಬಂದಿರುವುದನ್ನು ನೋಡಬಹುದಾಗಿದೆ. ಹದಿಮೂರನೇಯ ಶತಮಾನದ ರಾಘವಾಂಕನ ಕೃತಿ ‘ಹರಿಶ್ಚಂದ್ರ ಚರಿತೆಯು’ ಕಾವ್ಯರೂಪದ ನಾಟಕದ ಸನ್ನಿವೇಶಗಳ ಪ್ರಸಂಗಳೆರಡನ್ನೂ ನೋಡುತ್ತೇವೆ. ಈ ಕಾವ್ಯದಲ್ಲಿ ಕರುಣರಸದ ಭಾವ ಕಂಡುಬರುತ್ತದೆ. ಇದರ ಸ್ಥಾಯಿಭಾವ ಶೋಕವಾಗಿದೆ.

ಚಂದ್ರಮತಿಯು ಲೋಹಿತಾಶ್ವನೆಂಬ ಮಗನನ್ನು ಕಳೆದುಕೊಂಡಾಗ ದುಃಖಿಸುವ ಸನ್ನಿವೇಶವನ್ನು ಕವಿ ನಾಟಕೀಯವಾಗಿ ವರ್ಣಿಸಿದರೂ ಅಲ್ಲಿ ದೃಶ್ಯಕಾವ್ಯವನ್ನು ಶೋಕಮಯವಾಗಿ ನೋಡುವ ಪ್ರಸಂಗ ಕಂಡುಬರುತ್ತದೆ.

ಏಕೆ ಕಚ್ಚಿತ್ತಾವ ಕಡೆಯಾವ ಹೊಲನಕ್ಕ
ಟಾ ಕುಮಾರಂ ಮಡಿದ ಠಾವೆನಿತು ದೂರವೆನ
ಲೀ ಕಡೆಯೊಳೀ ಹೊಲದೊಳೀ ಮರದ ಕೆಲದ ಹುತ್ತಿನ ಹುಲ್ಲ ಕೊಯ್ಯೆ ಕೈಯ
ನೂಕಿ ಫಣಿಯಗಿಯೆ ಕೆಡೆದಂ ದೂರವಲ್ಲಲ್ಲ
ಬೇಕಾದಡೀಗ ಹೋಗಲ್ಲದಿರ್ದಡೆ ಬಳಿಕ
ನೇಕ ಭಲ್ಲುಕ ಜಂಬುಕಂ ಘೂಕವೃಕಗಳೆಳೆಯದೆ ಬಿಡವು ಕೇಳೆಂದನು

ಮಗ ಸತ್ತಿರುವ ಸುದ್ದಿ ಕೇಳಿ ಚಂದ್ರಮತಿಯ ಎದೆ ಝಲ್ಲೆಂದಿತು. ಆಕೆ ಲೋಹಿತಾಶ್ವನ ಸ್ನೇಹಿತನನ್ನು "ಏಕೆ ಕಚ್ಚಿತು? ಎಲ್ಲಿ? ಯಾವಾಗ?" ಎಂದು ಕೇಳಲು, ಆ ಬಾಲಕನು ಈ ದಿಕ್ಕಿನಲ್ಲಿ ಇಂತಹ ಮರದ ಕೆಳಗೆ ಒಂದು ಹುತ್ತವಿದೆಯೆಂದೂ ಅಲ್ಲಿ ಹುಲ್ಲನ್ನು ಕೊಯ್ಯುವಾಗ ಹಾವು ಕಚ್ಚಿತೆಂದೂ ಆ ಸ್ಥಳವು ಹೆಚ್ಚು ದೂರವಿಲ್ಲೆಂದೂ ಹೇಳಿದನು. ಈ ಪ್ರಸಂಗದಲ್ಲಿ ಕವಿ ಶೋಕಭಾವವನ್ನು ತಂದಿರುವುದನ್ನು ನೋಡುತ್ತೇವೆ. ಭರತನ ರಸ ಭಾವಗಳಲ್ಲಿ ಕರುಣರಸ ಕಂಡುಬಂದಿದೆ. ಈ ಕಾವ್ಯದಲ್ಲಿ ನಾಟಕೀಯವಾಗಿ ಸಂಭಾಷಣೆಯನ್ನು ಅಭಿವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ.

ಮನುಷ್ಯನ ಕೋಪಕ್ಕೆ ಮಿತಿಯಿಲ್ಲದೆ ಹೋದರೆ ಅವನು ಯೋಚಿಸುವ ವಿಧಾನವೇ ಬೇರೆ. ನಡೆದುಕೊಳ್ಳುವ ರೀತಿಯೇ ಭಿನ್ನವಾಗಿರುತ್ತದೆ. ಭರತನ ರಸಸೂತ್ರದಲ್ಲಿ ರೌದ್ರರಸವೂ ಕೂಡ ಒಂದಾಗಿದೆ. ಇದರ ಸ್ಥಾಯಿ ಭಾವ ಕ್ರೋಧ. ರನ್ನನ ಗದಾಯುದ್ಧದಲ್ಲಿ ಅಪಮಾನಿತರಲ್ಲಿ ಒಬ್ಬನಾದ ಭೀಮನು ಕೌರವರು ನಡೆದುಕೊಂಡ ರೀತಿಯಿಂದ ಒತ್ತಡದಿಂದ ಕೋಪ ಉಂಟಾಗುತ್ತದೆ. ಅಸಹಾಯಕನಾದ ಕಾರಣಕ್ಕೆ ದುಃಖವೂ ಇರುತ್ತದೆ. ಇದರಿಂದ ಕುರುಕ್ಷೇತ್ರದ ಹೋರಾಟದಲ್ಲಿ ಭೀಮನು ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವ ರೀತಿಯನ್ನು ರನ್ನನು ತನ್ನ ಕಾವ್ಯದಲ್ಲಿ ಕಟ್ಟಿಕೊಟ್ಟಿದ್ದಾನೆ. ಇಲ್ಲಿ

ದಂಡಿಕವೈರಿ ವೈರಿಬಲಲೋಹಿತಬಂಧುರದಂಡಮೀ ಭುಜಾ
ದಂಡಮುಮಾಜಿಭೀಕರವಿರೋಧಿವಿದಾರಣದಂಡಮೀ ಗದಾ
ದಂಡಮುಮುಗ್ರಪನ್ನಗವಿಭೀಷಣಮಾಹವಶಂಡಮೀ ಧನು
ರ್ದಂಡಮುಮುಳ್ಳಿನಂ ದ್ರುಪದರಂನೆ ಸಂಧಿಯನಾಗಲೀವೇನೇ

ಭೀಮನು ಶತ್ರುಗಳನ್ನು ದಂಡಿಸಿ ವೈರಿಗಳ ರಕ್ತದಿಂದ ಸಿಂಗರಿಕೊಂಡ ಈ ನನ್ನ ತೋಳು, ಯುದ್ಧರಂಗದಲ್ಲಿ ಎದುರಾಳಿಗಳನ್ನು ಭಯಾನಕವಾಗಿ ಸೀಳಿದ ಈ ನನ್ನ ಗದೆ, ಕೆರಳಿದ ಸರ್ಪನಂತೆ ಭೀಕರವಾದ ಈ ನನ್ನ ರಣಧೀರ ಧನಸ್ಸು- ಇವು ಮೂರು ಇರುವವರೆಗೆ ನಾನು ಸಂಧಿಯನ್ನು ಅಗಗೊಡುವೆನೆ? ಎಂದು ಭೀಮನು ಹೇಳುವ ರೀತಿಯಲ್ಲಿ ಆ ಕ್ರೋಧ ಮನುಷ್ಯನಿಗೆ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ಕಾಣಬಹುದಾಗಿದೆ. ಇದೇ ವಿಚಾರವಾಗಿ ಬಿಂ.ಎಂ.ಶ್ರೀಯವರ ಅಶ್ವತಾಮನ್ ನಾಟಕದಲ್ಲಿ ನೋಡಬಹುದು. ಬಿಂ.ಎಂ.ಶ್ರೀಯವರ ನಾಟಕದ ವಸ್ತು ಮಹಾಭಾರತದ ಕಥೆಯಾಗಿದೆ. ಮೂಲ ಅವರು ಏಜಾಕ್ಸ್ನ ಅನುವಾದ ಕೃತಿಯಾದರೂ ಈ ನಾಡಿನ ನೆಲದ ಹಿನ್ನೆಲೆಯಲ್ಲಿ ನಾಟಕ ರೂಪುಗೊಳ್ಳುತ್ತದೆ. ಅಶ್ವತಾಮನ್ ಉಪಪಾಂಡವರನ್ನು ಕೊಲ್ಲುವ ರೀತಿಯಲ್ಲಿ ಅವನ ಕೋಪ ಎಷ್ಟರಮಟ್ಟಿಗೆ ಇತ್ತು ಎಂಬುದನ್ನು ತಿಳಿಯಬಹುದಾಗಿದೆ. ಭರತನ ರಸಸೂತ್ರದ ಒಂದೊOದು ಭಾವವೂ ಮುಂದೆ ರಚಿತವಾದ ನಾಟಕಗಳಲ್ಲಿ ಕಂಡುಬರುತ್ತದೆ.

ವೀರರಸಕ್ಕೆ ಸಂಬOಧಿಸಿದಂತೆ ನಾಟ್ಯಶಾಸ್ತ್ರದಲ್ಲಿ ಭರತನು ದಾನವೀರ, ಧರ್ಮವೀರ, ಯುದ್ಧವೀರ ಹೀಗೆ ಅನೇಕ ವಿಧದ ವ್ಯಾಖ್ಯಾನಗಳನ್ನು ನೀಡಿದರೂ ಕಾವ್ಯಕ್ಕೆ ಸಂಬಂಧಿಸಿದಂತೆ ಅದು ಯುದ್ಧಕ್ಕೆ ಸೀಮಿತವಾಗುವಂತೆ ಕವಿಗಳು ತಮ್ಮ ಕೃತಿಗಳನ್ನು ರಚನೆ ಮಾಡಿದ್ದಾರೆ. ಪಂಪನು ಯುದ್ಧದ ವರ್ಣನೆಯನ್ನು ವಿಕ್ರಮಾರ್ಜುನವಿಜಯದಲ್ಲಿ ವಿವರಿಸುತ್ತಾ ನಿಜವಾದ ಶಕ್ತಿವಂತರು ಯಾರು ಎಂಬುದನ್ನು ತನ್ನ ಕಾವ್ಯದಲ್ಲಿ ಪಟ್ಟಿ ಮಾಡುತ್ತಾನೆ.

ಚಲದೊಳ್ ದುರ್ಯೋಧನಂ ನನ್ನಿಯೊಳಿನನತಯಂ ಗಂಡಿನೊಳ್ ಭೀಮಸೇನಂ
ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ ಚಾಪವಿದ್ಯಾ
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ, ಧರ್ಮದೊಳ್ ನಿ
ರ್ಮಲಂ ಚಿತ್ತಂ ಧರ್ಮಪುತ್ರಂ ಮಿಗಿಲ್ ಇವರ್ಗಳಿನೀ ಭಾರತಂ ಲೋಕಪೂಜ್ಯಂ

ಮೇಲಿನ ಕಾವ್ಯ ಖಂಡದಲ್ಲಿ ಶಕ್ತಿದಾಯಕರನ್ನು ಅವರ ವೀರಗುಣವನ್ನು ವರ್ಣಿಸುವ ಪಂಪನ ಸಾಲುಗಳು ವೀರರಸಕ್ಕೆ ಉತ್ತಮ ಉದಾಹರಣೆಯಾಗಿ ಕಂಡುಬರುತ್ತವೆ. ವೀರರ ಸಾಲಿಗೆ ದುರ್ಯೋಧನ, ಭೀಮಸೇನ, ಮದ್ರೇಶ(ಶಲ್ಯ), ಭೀಷ್ಮ, ದ್ರೋಣ, ಅರ್ಜುನ, ಧರ್ಮರಾಯ, ಇವರೆಲ್ಲರೂ ಕೂಡ ಒಂದೊಂದು ರೀತಿಯಲ್ಲಿ ವೀರರಾಗಿರುವುದನ್ನು ಕವಿ ಪಂಪನ ತನ್ನ ಕಾವ್ಯದಲ್ಲಿ ಉಲ್ಲೇಖಿಸುತ್ತಾನೆ. ಇಂಥ ಕಾವ್ಯದ ರಚನೆಯಲ್ಲಿ ಪಂಪನಿಗೆ ವೀರರಸದ ಮಹತ್ವ ತಿಳಿದಿರುವುದನ್ನು ಕಾಣುತ್ತೇವೆ.

ಹಳಗನ್ನಡದಲ್ಲಿ ರಚಿತವಾದ ಒಂದೊಂದು ಕೃತಿಗಳು ಪ್ರತ್ಯಕ್ಷ ಪರೋಕ್ಷವಾಗಿ ಭರತನ ನಾಟ್ಯಶಾಸ್ತ್ರದ ಪ್ರಭಾವಕ್ಕೆ ಒಳಗಾಗಿರುವುದನ್ನು ಅಧ್ಯಯನದಲ್ಲಿ ತಿಳಿಯಬಹುದಾಗಿದೆ. ವಿದ್ವಾಂಸರು ಭಯವು ಸಹಜವಾಗಿ ಅಜ್ಞಾನದಿಂದ ಉಂಟಾಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ಮನುಷ್ಯನಿಗೆ ಚಿಂತೆಯಿಂದ ಕೂಡಿದ ವಿಚಾರವು ಕೂಡ ಆತಂಕಕ್ಕೆ ಕಾರಣವಾಗಿ ಅದು ಭಯವನ್ನು ಉಂಟುಮಾಡುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ನಾಗಚಂದ್ರನ ಕರ್ಣಾಟಕ ಕಾದಂಬರಿ ಕೃತಿಯಲ್ಲಿ ತಾಯಿಯನ್ನು ಕಳೆದುಕೊಂಡ ಗಿಳಿಮರಿಯೊಂದು ತನ್ನ ಮುದಿ ತಂದೆಯ ನೆರಳಲ್ಲಿ ಆಸರೆಯನ್ನು ಪಡೆಯುವ ಸಂದರ್ಭದಲ್ಲಿ ಅದರ ಭಯವನ್ನು ಕವಿ ತನ್ನ ಕಾವ್ಯದಲ್ಲಿ ವಿವರಿಸುತ್ತಾನೆ,

ಆಂ ಜನಕನೆರೆಕೆಯೊಳಗಿ
ರ್ದಂಉತ್ತಂ ಕೇಳುತಿರ್ದೆನಿರ್ಪನ್ನವರಂ
ಬಿಂದಜದಡವಿಯೊಳಗೆಲ್ಲಂ

ನಂಜಿನ ಮರೆಗೊಂಡ ಬಿಟ್ಟ ತೆನಾಯ್ತಾಗಳ್ ಎಂದು ಯೋಚಿಸುವ ಭಯಗೊಂಡ ಗಿಳಿ ಮರಿಯ ಮನಸ್ಥಿತಿಯನ್ನು ಹೇಳುವ ಕವಿ ಗಿಳಿಯೊಂದು ತಂದೆಯ ರೆಕ್ಕೆಯೊಳಗಿದ್ದು ಹೆದರುತ್ತಾ ಇದೆಲ್ಲವನ್ನೂ ಕೇಳುತ್ತಿದ್ದಾಗ ಅಷ್ಟರಲ್ಲಿ ಆ ವಿಂಧ್ಯಾರಣ್ಯದಲ್ಲೆಲ್ಲಾ ವಿಷದ ಮಳೆ ಬಂದು ನಿಂತಂತೆ ಆಯಿತು. ಎಂದು ಹೇಳುವ ಪರಿ ಭಯವನ್ನು ಉದ್ದೀಪನಗೊಳಿಸುವ ರೀತಿಯನ್ನು ಕವಿ ತನ್ನ ಕಾವ್ಯದಲ್ಲಿ ತಂದಿದ್ದಾನೆ.

ಹರಿಶ್ಚಂದ್ರ ನಾಟಕದಲ್ಲಿ ಚಂದ್ರಮತಿ ಮಗನನ್ನು ಹುಡುಕುವ ರೀತಿ ಹಾಗೆಯೇ ಕುವೆಂಪುರವರ ಬೆರಳ್ಗೆಕೊರಳ್ ನಾಟಕದಲ್ಲಿ ಏಕಲವ್ಯನ ತಾಯಿ ಮಗನನ್ನು ಹುಡುಕುವ ರೀತಿಯನ್ನು ಈ ಭಯಾನಕರಸದ ಮೂಲಕ ಕಾಣಬಹುದಾಗಿದೆ.

ಕಾವ್ಯನಾಟಕಗಳಲ್ಲಿ ಒಂದೊಂದು ರಸವೂ ಓದುಗನಿಗೆ, ನೋಡಗನಿಗೆ ದೃಶ್ಯಕಾವ್ಯವನ್ನು ವರ್ಣನಾತ್ಮಕವಾಗಿ ವಿವರಿಸುವುದನ್ನು ನೋಡುತ್ತೇವೆ. ಮುಂದುವರೆದOತೆ ಭೀಭತ್ಸರಸವು ಜುಗುಪ್ಸೆಯಿಂದ ಉಂಟಾಗುವ ಪರಿಯನ್ನು ನಾಗವರ್ಮನ ಪಂಪರಾಮಾಯಣದಲ್ಲಿ ರಾವಣ ಸೀತೆಯನ್ನು ಆಕರ್ಷಿತನಾಗುವುದು, ಆಕೆ ಧಕ್ಕದೆ ಹೋದಾಗ ಜಿಗುಪ್ಸೆಯನ್ನು ತಾಳುವ ರೀತಿಯನ್ನು ಕದಡಿದ ಸಲಿಲಂ ತಿಳಿವಂದದೆ ಎಂಬ ಪ್ರಸಂಗದಲ್ಲಿ ನೋಡಬಹುದು.

ಕದಡಿದ ಸಲಿಲಂ ತಿಳವಂ
ದದೆ ತನ್ನಿಂ ತಾನೆ ತಿಳಿದ ದಶವದನಂಗಾ
ದುದು ವೈರಾಗ್ಯಂ ಸೀತೆಯೊ
ಳುದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ.

ರಾವಣನಿಗೆ ಕದಡಿದ ನೀರು ತನ್ನಿಂದ ತಾನೆ ತಿಳಿಯಾದಂತೆ ಸೀತೆಯಲ್ಲಿ ವೈರಾಗ್ಯ ಉಂಟಾಯಿತು. ಉದಾತ್ತನಲ್ಲಿ ಸ್ಥಿರವಾದ ಪ್ರೀತಿ ಹುಟ್ಟುವುದಿಲ್ಲವಲ್ಲವೆ? ಹಾಗೆ ಮನಸ್ಸಿನಲ್ಲಿ ಹುಟ್ಟಿದ ಕಾರುಣ್ಯರಸವೇ ಸೀತೆಯಲ್ಲುಂಟಾದ ಅನುರಕ್ತತೆಯನ್ನು ತೊಳೆದು ಕಳೆಯಲು ಸಹಜಸ್ವಭಾವದಿಂದ ಕೂಡಿದವನಾಗಿ ತನ್ನ ಆತ್ಮೀಯ ಪೌರುಷದಿಂದ ಕೂಡಿದ್ದ ರಾವಣನು ತನ್ನ ಗುಣಪರಿಪಾಲನೆಗಾಗಿ ನನಗೂ ಮನಸ್ಸನ್ನು ಮಾಡಲಿಲ್ಲ. ಶ್ರೇಷ್ಠವಾದ ಒಡವೆ ವಸ್ತ್ರ, ಸುಗಂಧ ದ್ರವ್ಯವೇ ಮೊದಲಾದವುಗಳನ್ನು ಅಪೇಕ್ಷಿಸದೆ ಖೇಚರ ರಾಜ್ಯಲಕ್ಷ್ಮಿಯನ್ನು ತೃಣಕ್ಕೆ ಸಮಾನವಾಗಿ ಭಾವಿಸಿದಳು. ಈ ಸೀತೆಯನ್ನು ಮೊದಲುಗೊಂಡು ಪೌರುಷ ಪ್ರಣಯಿಯಾದ ನಾನು ಹೀಗೆ ನನ್ನ ಪಾಪಕರ್ಮದಿಂದ ನನ್ನ ಸದ್ಗುಣದ ಕೇಡನ್ನು ಬಯಸುತ್ತೇನೆಯೇ? ಎಂದು ಹೇಳುವ ಮೂಲಕ ಆ ರಾವಣನು ಜಿಗುಪ್ಸೆ ಹೊಂದುತ್ತಾನೆ. ಕಾವ್ಯ ಓದುಗನಿಗೆ ಜೀವನದ ಉತ್ಕಟತೆ ಮತ್ತು ನಶ್ವರತೆ ಎರಡರ ಅನುಭವವನ್ನು ಹೊಂದುತ್ತಾನೆ.

ವ್ಯಕ್ತಿಗೆ ಅತ್ಯಂತ ಸಂತೋಷವನ್ನು ಉಂಟುಮಾಡುವುದು ಅದ್ಭುತವಾದ ವಿಸ್ಮಯ ಸನ್ನಿವೇಶ, ಜಗತ್ತನ್ನು ನೋಡಿದಾಗ. ಭರತನ ರಸವ್ಯಾಖ್ಯಾನದಲ್ಲಿ ಅದ್ಭುತರಸ ಕೂಡ ಒಂದಾಗಿದೆ. ವಿಸ್ಮಯ ಜಗತ್ತನ್ನು ಕಂಡಾಗ ಸಹಜವಾಗಿಯೇ ಆಶ್ಚರ್ಯ ಚಕಿತನಾಗಿ ಮನುಷ್ಯ ನೋಡುತ್ತಾನೆ. ಕವಿ ತನ್ನ ಕಾವ್ಯಗಳಲ್ಲಿ ಇದನ್ನು ತರುವ ಕೆಲಸವನ್ನು ಮಾಡುತ್ತಾನೆ. ಜನ್ನನ ಯಶೋಧರ ಚರಿತೆಯಲ್ಲಿ ಅಮೃತಮತಿ ಕೇವಲ ಮಾವುತಗನ ಹಾಡಿನ ಧ್ವನಿಗೆ ಮನಸೋತವಿಚಾರವನ್ನು, ಮುಂದುವರೆದOತೆ ತನ್ನ ಮನಸ್ಸು ಮತ್ತು ದೇಹವನ್ನು ಅರ್ಪಿಸುವ ವಿಚಿತ್ರ ಸನ್ನಿವೇಶವನ್ನು ಕಾವ್ಯದಲ್ಲಿ ಕಾಣುತ್ತೇವೆ.

ಅಂತೆಸೆಯೆ ಪಾಡುತಿರೆ ತ
ದ್ದಂತಿಪನತಿನೂತ್ನಗೀತ ಪಾತನ ವಿಕಲ
ಸ್ವಾಂತೆಗೆ ನೋಡುವ ಕೂಡುವ
ಚಿಂತೆ ಕಡಲ್ವರಿದುದಂದು ಬೆಳಗಪ್ಪಿನೆಗಂ

ಮಾವುತನು ಆ ರೀತಿ ಅತಿಮಧುರವಾಗಿ ಹಾಡುತ್ತಿದ್ದಾಗ, ಅವನ ಅತಿನೂತನವಾದ ಹಾಡು ಕಿವಿಗೆ ಬೀಳುತ್ತಲೇ ಇತ್ತು. ಅಮೃತಮತಿಯ ಮನಸ್ಸು ಆಗ ಕದಡಿ ಹೋಯಿತು. ಅವಳಿಗೆ ಕಣ್ಣಲ್ಲೇ ಬೆಳಗಾಯಿತು. ಬೆಳಗಾಗುವವರೆಗೂ ಅವನನ್ನು ಹೇಗೆ ನೋಡಲಿ, ಹೇಗೆ ಕೂಡಿಕೊಳ್ಳಲಿ ಎಂಬ ಚಿಂತೆಯೇ ಕಡಲಂತೆ ಉಕ್ಕಿ ಹರಿಯಿತು. ಎನ್ನುವ ಮನಸ್ಥಿತಿಯಲ್ಲಿ ಕಾವ್ಯದ ಪರಿಕಲ್ಪನೆಯು ವಿಸ್ಮಯದ ಸನ್ನಿವೇಶವನ್ನು ತಂದೊಡ್ಡುತ್ತದೆ.

ವಿಚಿತ್ರ ಸನ್ನಿವೇಶದಲ್ಲಿ ಕಾಮಕ್ಕೆ ಕಣ್ಣಿಲ್ಲ ಎಂಬ ಲೋಕರೂಢಿ ಮಾತಿನಂತೆ, ಮನಸ್ಸನ್ನು ನೀಡುವ ಹೆಣ್ಣುಗಂಡುಗಳ ವರ್ತನೆಯನ್ನು ಹಾಗೆಯೇ ಪುರುಷ ಸ್ತ್ರೀಯಾಗಿ ಪರಕಾಯ ಪ್ರವೇಶವನ್ನು ಮಾಡುವ ಸಿರಿಸಂಪಿಗೆ ನಾಟಕದಲ್ಲಿ, ಕಾರ್ನಾಡ್‌ರವರ ಯಯಾತಿ ನಾಟಕದಲ್ಲಿ ವಯಸ್ಸನ್ನು ನೀಡುವ ಹಿಂಪಡೆಯುವ ಅತಾರ್ಕಿಕ ಆದರೂ ಅದು ವಿಸ್ಮಯ ರೂಪದಲ್ಲಿ ಕಾಣುತ್ತೇವೆ.

ಅಂತಿಮವಾಗಿ ಭರತನು ಹೇಳಿರದ ಆದರೆ ಮುಂದೆ ಬಂದ ಲಾಕ್ಷಣಿಕರು ಶಾಂತರಸವೂ ಒಂದು ಎಂದು ಹೇಳುವ ಪರಿಯನ್ನು ನೋಡುತ್ತೇವೆ. ಇದಕ್ಕೆ ಉದಾಹರಣೆಯಾಗಿ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ವ್ಯಾಸರ ಮಾತಿನಂತೆ ಅಶ್ವಮೇಧಯಾಗದ ವಿಚಾರವಾಗಿ ಕೃಷ್ಣ ಅಸ್ತಿನಾವತಿಗೆ ಭೇಟಿಕೊಟ್ಟಾಗ ಪಾಂಡವರ ಮಾತಿಗೆ ನಗುತಾ ಹೇಳಿದ ಕೃಷ್ಣನ ವಿಚಾರಗಳನ್ನು ಶಾಂತರಸದ ಮೂಲಕ ಕಾಣುತ್ತೇವೆ.

**ಉಪಸಂಹಾರ.**

ಕಾವ್ಯ, ನಾಟಕ, ಕಥೆ, ಕಾದಂಬರಿಗಳು ಸಾಹಿತ್ಯದ ಪ್ರಕಾರಗಳಾದರೂ ಅವುಗಳಲ್ಲಿ ಓದುಗನು ಅಥವಾ ವೀಕ್ಷಣೆ ಮಾಡುವ ಪ್ರೇಕ್ಷಕನಲ್ಲಿ ರಸಗಳ ಉದ್ದೀಪನ ಉಂಟಾಗದ ಹೊರತು ಯಾವ ಪ್ರಕಾರಗಳು ಯಶಸ್ಸನ್ನು ಸಾಧಿಸುವುದಿಲ್ಲ. ಅದರ ಯಶಸ್ಸಿಗೆ ಪ್ರೇರಣೆ ರಸಾನುಭಾವಗಳೇ ಆಗಿವೆ. ಅವುಗಳ ಹಿನ್ನಲೆಯಲ್ಲಿ ಭಾರತೀಯ ಎಲ್ಲಾ ಸಾಹಿತ್ಯಗಳು ತಮ್ಮನ್ನು ಕೇಂದ್ರಿಕರಿಸಿ ರಚನೆಯಾಗಿವೆ. ಇದು ಪಾಶ್ಚಾಮಾತ್ಯರ ಕೃತಿಗಳಲ್ಲೂ ಕಂಡುಬರುತ್ತದೆ. ಶೇಕ್ಸಫಿಯರ್‌ನ ರೋಮಿಯೋ ಜುಲಿಯೆಟ್ ನಂತಹ ನಾಟಕವು, ಮಿಲ್ಟನ್ನನ ದಿ ಪ್ಯಾರಿಡೈಸ್ ಲಾಸ್ಟ್ ದೀರ್ಘಕಾವ್ಯದಲ್ಲೂ ರಸಾನುಭವಗಳು ಉಂಟಾಗುವುದನ್ನು ಕಾಣುತ್ತೇವೆ. ಇಲ್ಲಿ ಭರತನ ರಸಸೂತ್ರಗಳು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪ್ರಭಾವವನ್ನು ಬೀರಿ ಸಾಹಿತ್ಯದ ಸೌಂದರ್ಯವನ್ನು ಹೆಚ್ಚಿಸಿವೆ.

**ಗ್ರಂಥಋಣ:**


೧. ಭಾರತೀಯ ಕಾವ್ಯಮೀಮಾಂಸೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೬.
೨. ಕನ್ನಡ ಕೈಪಿಡಿ, ಮೈಸೂರು ವಿಶ್ವವಿದ್ಯಾಲಯ, ೧೯೭೭.
೩. ಪಂಪಮಹಾಕವಿ ವಿರಚಿತ ಆದಿಪುರಾಣ, ಕನ್ನಡ ಸಾಹಿತ್ಯ ಪರಿಷತ್ತು, ೨೦೦೪
೪. ಪಂಪಮಹಾಕವಿ ವಿರಚಿತ ಪಂಪಭಾರತO, ಕನ್ನಡ ಸಾಹಿತ್ಯ ಪರಿಷತ್ತು, ೨೦೧೦
೫. ನಾಗವರ್ಮನ ಕರ್ಣಾಟಕ ಕಾದಂಬರಿ, ಕನ್ನಡ ಸಾಹಿತ್ಯ ಪರಿಷತ್ತು, ೧೯೯೯
೬. ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ, ಮೈಸೂರು ವಿಶ್ವವಿದ್ಯಾಲಯ, ೧೯೮೮
೭. ಜನ್ನನ ಯಶೋಧರ ಚರಿತೆ, ಕನ್ನಡ ಸಾಹಿತ್ಯ ಪರಿಷತ್ತು, ೨೦೦೧,
೮. ರನ್ನನ ಸಾಹಸಭೀಮ ವಿಜಯಂ, ಕನ್ನಡ ಸಾಹಿತ್ಯ ಪರಿಷತ್ತು, ೨೦೦೪
೯. ಲಕ್ಷ್ಮೀಶನ ಜೈಮಿನಿಭಾರತ, ಮೈಸೂರು ವಿಶ್ವವಿದ್ಯಾಲಯ, ೧೯೯೩
೧೦. ರಾಘವಾಂಕನ ಹರಿಶ್ಚಂದ್ರ ಚರಿತೆ, ಕನ್ನಡ ಸಾಹಿತ್ಯ ಪರಿಷತ್ತು, ೨೦೧೦.